2.00 P.M.

QUESTION FOR ANSWER ON THE DAY

(but not taken up)

Feeder Channel to Naikanahatti Hirekere.

*Q.—86. Sri B. L. GOWDA (Challakere).—

Will the Government be pleased to state :—

(a) whether there has been a longstanding request to construct a feeder channel to Naikanahatti Hirekere from Jinagehalla ;

(b) whether survey is conducted in this behalf ;

(c) if so, what is the estimated cost ;

(d) when the work is going to be started ?

A.—Sri ALUR HANUMANTHAPPA (Deputy Minister for Minor Irrigation).—

(a) Yes.

(b) Yes.

(c) About Rs. 11.50 lakhs.

(d) After the estimate is sanctioned.

STATEMENT OF THE MINISTER FOR FORESTS AND FISHERIES.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು).—ಮೊನ್ನೆ ದಿವಸ ನನಗೆ ಸಂಬಂಧಪಟ್ಟ ಪ್ರಶ್ನೆಗೆ ಕೆಲವು ಎವರಗಳನ್ನು ಕೊಡುತ್ತೇನೆಂದು ಹೇಳಿದ್ದೆ. ಮಾನ್ಯ ಅಧ್ಯಕ್ಷರು ಅಪ್ಪಣೆಕೊಟ್ಟರೆ ಅದನ್ನು ಈ ಸಭೆಯ ಮುಂದೆ ಇಡಬಯಸುತ್ತೇನೆ. ಶ್ರೀ ಆರ್. ಕೆ. ಕರ್ಕೆರ ಅಂಡ್ ಪಾರ್ಟಿಗೆ ತಾ 11-5-1962ರಲ್ಲಿ ಸುಮಾರು 1 ಲಕ್ಷ 25 ಸಾವಿರ ರೂಪಾಯಿಗಳನ್ನು 120 ಹೆಚ್. ಪಿ. ಎಂಜಿನ್ನನ್ನು ತರಿಸಿಕೊಂಡು ಬೋಟ್ ಕಟ್ಟಬೇಕೆಂದು ಸರ್ಕಾರ ಮಂಜೂರು ಮಾಡಿತ್ತು. ಮೊದಲನೆಯ ಕಂತಾಗಿ 55 ಸಾವಿರ ರೂಪಾಯಿಗಳನ್ನು ಅವರು ಹೊರಗಡೆಯಿಂದ ಎಂಜಿನ್ನನ್ನು ಇಂಪೋರ್ಟ್ ಮಾಡುವ ಉದ್ದೇಶಕ್ಕಾಗಿಯೇ ಕೊಟ್ಟಿತು. ಅವರು ಕಂಟ್ರೋಲರ್ ಆಫ್ ಇಂಪೋರ್ಟ್ಸ್ ಅಂಡ್ ಎಕ್ಸ್‌ಪೋರ್ಟ್ಸ್ ಅವರ ಲೈಸೆನ್ಸ್ ತೋರಿಸಿದಮೇರೆ ಅವರಿಗೆ ಆ ಹಣವನ್ನು ರಿಲೀಸ್ ಮಾಡಿದ್ದು. ಆದರೆ ಅವರು ಫಾರೆನ್ ಎಕ್ಸ್‌ಚೇಂಜು ವಿಷಯದಲ್ಲಿ ತೊಂದರೆ ಇದೆ, ಅದಕ್ಕೋಸ್ಕರ ಅದನ್ನು ಇಂಪೋರ್ಟ್ ಮಾಡಲಕ್ಕಾಗಲಲ್ಲವೆಂದು ಹೇಳಿ ಅದೇ ಹಣವನ್ನು ಬೊಂಬಾಯಿನಲ್ಲಿ ಹರ್ ಕಟ್ಟುವುದಕ್ಕೆ ಮತ್ತು ಬೋಟ್ ಕಟ್ಟುವುದಕ್ಕೆ ಉಪಯೋಗಿಸಿದರು. ಅಲ್ಲಿನ ಕಂಪೆನಿಯವರು ಈ ಕೆಲಸಮಾಡಿರುವುದನ್ನು ನಮ್ಮ ಡೈರೆಕ್ಟರ್ ಅವರು ನೋಡಿದ್ದಾರೆ. ಅವರಿಗೆ ಇನ್ನು ಮುಂದೆ ಯಾವ ಸಾಲವನ್ನೂ ಕೊಟ್ಟಿಲ್ಲ. ಬೋಟನ್ನು ಕಟ್ಟಿದಮೇರೆ ಮಿಕ್ಕ ಹಣವನ್ನು ಕೊಡಬೇಕೆಂದು ಕೇಳಿದ್ದೇವೆ.

ಎರಡನೆಯದಾಗಿ ಕಾರೊನೆಟ್ ಕ್ಯಾನಿಂಗ್ ಕಂಪೆನಿಯವರಿಗೆ ಶೀತರಾಗ್ಯಹಗಳನ್ನು ಕಟ್ಟ ಬೇಕೆಂದು ರೂಲ್ಸ್ ಪ್ರಕಾರ ಸಬ್ಸಿಡಿಯನ್ನು ಕೊಟ್ಟಿದೆ. ಆದರೆ ನಗದು ಹಣವನ್ನು ಸಾಲದ ರೂಪ ವಾಗಿ ಕೊಟ್ಟಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಪಬ್ಲಿಷರ್ ಕನ್ನಡ ಡೈಲಿ ನವಭಾರತದಲ್ಲಿ ಈ ವಿಚಾರ ವನ್ನು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಅಚ್ಚುಹಾಕಿಸಿದ್ದಾರೆ.